<u>1ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ</u>
<u>ಬೆಂಗಳೂರು ನಗರ</u>

ಸಿ.ಸಿ. ನಂ. 15317/2016

ಸಿಡಬ್ಲೂ - 51ಪಿಡಬ್ಲೂ-13

| | |
|---|---|
| ಸಾಕ್ಷಿದಾರರ ಹೆಸರು | : ಡಾ.ವಾಣಿ ಎನ್ |
| ಗಂಡನ ಹೆಸರು | : ಎ. ಮುರಳಿ |
| ವಯಸ್ಸು | : 49 ವರ್ಷ |
| ಕೆಲಸ | : ಅಸಿಸ್ಟಂಟ್ ಡೈರೆಕ್ಟರ್ ಎಫ್ ಎಸ್ ಎಲ್ ದಾವಣಗೆರೆ |
| ವಾಸ | : ಮಡಿವಾಳ, ಬೆಂಗಳೂರು |

<u>ಸಾಕ್ಷಿಯನ್ನು ದಿನಾಂಕಃ 31-01-2026 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.</u>
<u>ಮುಖ್ಯ ವಿಚಾರಣೆ ಹಿ.ಸ.ಸಾ.ಅ. ರವರಿಂದಃ</u>

ನಾನು ಆಗಸ್ಟ 2004 ರಿಂದ ಸೆಪ್ಟೆಂಬರ್ 2025 ರವರೆಗೆ ಎಫ್ ಎಸ್ ಎಲ್ ಬೆಂಗಳೂರಿನಲ್ಲಿ ವಿವಿಧ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಪ್ರಕರಣದಲ್ಲಿ ತನಿಖಾಧಿಕಾರಿಗಳ ಕೋರಿಕೆಯ ಮೇರೆಗೆ ನಾನು ನನ್ನ ಸಹೋದ್ಯೋಗಿಗಳ ಜೊತೆಯಲ್ಲಿ ಕೃತ್ಯ ನಡೆದ ಸ್ಥಳಕ್ಕೆ ಬೇಟಿ ನೀಡಿ ಪರಿಶೀಲಿಸಿ ಸ್ಥಳದಲ್ಲಿ ಒಟ್ಟು 8 ವಸ್ತುಗಳನ್ನು ಸಂಗ್ರಹಿಸಿರುತ್ತೇನೆ. ವಾಹನಗಳು ಬೆಂಕಿಯಿಂದ ಸುಟ್ಟುಹೋಗಿರುವ ವಿಚಾರವಾಗಿ 8 ವಸ್ತುಗಳನ್ನು ಸಂಗ್ರಹಿಸಿರುತ್ತೇವೆ.

ದಿ. 02-03-2016 ರಂದು ತನಿಖಾಧಿಕಾರಿಗಳು ಈ ಹಿಂದೆ ನಾನು ನಾನು ಘಟನಾ ಸ್ಥಳದಿಂದ ಸಂಗ್ರಹಿಸಲಾಗಿದ್ದ 8 ವಸ್ತುಗಳ ಪೈಕಿ 7 ವಸ್ತುಗಳನ್ನು ಎಫ್ ಎಸ್ ಎಲ್ ರವರಿಗೆ ಕಳುಹಿಸಲಾಗಿತ್ತು, ಅವುಗಳನ್ನು ಸ್ವೀಕರಿಸಿ ನಮ್ಮ ಕಚೇರಿ ಸಂಖ್ಯೆ ಎಫ್ ಎಸ್ ಎಲ್ / ಸಿ ಎಸ್ /164/2016 ರಂತೆ ಸಂಖ್ಯೆಯನ್ನು ನೀಡಿ ಅವುಗಳನ್ನು ಪರೀಕ್ಷಿಸಿ, ಆ ಬಗ್ಗೆ ಎಫ್ ಎಸ್ ಎಲ್ ವರದಿಯನ್ನು ನೀಡಿರುತ್ತೇನೆ.

ನನ್ನ ಅಭಿಪ್ರಾಯದಂತೆ ವಾಹನಗಳನ್ನು ಯಾವುದೇ ಪೆಟ್ರೋಲಿಯಂ ಉತ್ಪನ್ನಗಳನ್ನು ಬಳಸಿ ಸುಟ್ಟಿರುವುದಿಲ್ಲ ಎಂದು ಹೇಳಿರುತ್ತೇನೆ. ಸಾಕ್ಷಿಯು ತಮಗೆ ನೀಡಲಾದ ಮನವಿ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 10 ಎಂದು ಸಾಕ್ಷಿಯ ಸಹಿಯನ್ನು ನಿಪಿ. 10 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಸ್ಥಳಕ್ಕೆ ಬೇಟಿ

ನೀಡಿ ಸಂಗ್ರಹಿಸಿದ ವಸ್ತುಗಳನ್ನು ತನಿಖಾಧಿಕಾರಿಗಳಿಗೆ ನೀಡಿದ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 11 ಎಂದು ಸಾಕ್ಷಿಯ ಸಹಿಯನ್ನು ನಿಪಿ. 11 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಸದರಿ ಎಫ್ ಎಸ್ ಎಲ್ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 12 ಎಂದು ಸಾಕ್ಷಿಯ ಸಹಿಯನ್ನು ನಿಪಿ. 12 ಎ ಎಂದು ಗುರುತಿಸಲಾಯಿತು.

ಪರೀಕ್ಷಯ ನಂತರ ಮಾದರಿ ಸೀಲನೊಂದಿಗೆ ವಸ್ತುಗಳನ್ನು ತನಿಖಾಧಿಕಾರಿಗಳಿಗೆ ಹಿಂದಿರುಗಿಸಿದ್ದು ಸದರಿ ಮಾದರಿ ಸೀಲಿನ ನಕಲನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ. 13 ಎಂದು ಸಾಕ್ಷಿಯ ಸಹಿಯನ್ನು ನಿಪಿ. 13 ಎ ಎಂದು ಗುರುತಿಸಲಾಯಿತು. ನಾನು ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಪಿ ಎಫ್ ನಂ. 15/2016 ರಂತೆ ಸಂಗ್ರಹಿಸಲಾದ ಕ್ರಮ ಸಂಖ್ಯೆ 1 ರಿಂದ 6 ರ ಮುದ್ದೆಮಾಲುಗಳನ್ನು ನೋಡಿ ಗುರುತಿಸಿದ್ದು ಅವುಗಳೆಂದರೆ

1. Debris sticking to outside of Wagon R

2. Swab from outside of Wagon R

3. Control Swab

4. Debris from inside of Waghon R

5. Electronic gadget

6. Swab from outside of Palio Car

7. Inside Debris of Palio ಇವುಗಳನ್ನು ಮು. ಮಾ 3 ರಿಂದ 9 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು ಆರೋಪಿತರ ಪರ ವಕೀಲರಿಂದಃ</u>

ನಾನು 21 ವರ್ಷಗಳಿಂದ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಮು. ಮಾ 3 ರಿಂದ 9 ನ್ನು ಘಟನಾ ಸ್ಥಳದಲ್ಲಿ ಪಡೆದಿಲ್ಲ ಎಂದರೆ ಸರಿಯಲ್ಲ. ಆ ವಸ್ತುಗಳನ್ನು ಮತ್ತು ದಾಖಲೆಗಳನ್ನು ಸೃಷ್ಟಿಸಿ ನನಗೆ ತಂದು ಕೊಟ್ಟಿದ್ದರು ಎಂದರೆ ಸರಿಯಲ್ಲ . ನಾನು ಯಾವುದೇ ಘಟನಾ ಸ್ಥಳಕ್ಕೆ ಹೋಗಿಲ್ಲ ಮತ್ತು ಯಾವುದೇ ಸ್ಯಾಂಪಲ್ ನ್ನು ಪಡೆದಿಲ್ಲ

ಎಂದರೆ ಸರಿಯಲ್ಲ. ಆರೋಪಿಗಳಿಗೂ ನಾನು ಹೇಳಿದ ಮಸ್ತುಗಳಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ ಇಲ್ಲ</u>

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಯಿತು.)

ಓ ಹೇ ಕೇ ಸ ಇ ಒ

1 ನೇ ಅ. ಮು. ನ್ಯಾ.ದಂ. ನ್ಯಾ